ಹೆಚ್ಚಿತ್ತು. ಸರ್ಕಾರಿ ಆಸ್ಪತ್ರೆ ಹತ್ತಿರವೇ ಇದ್ದುದರಿಂದ, ಅಗತ್ಯವಿದ್ದ ಗುಳಿಗೆ ಟಾನಿಕ್ ಕೊಟ್ಟರು. ಇವಳು ಚೇತರಿಸಿಕೊಂಡರೂ ಫಲವೇನೂ ಕಾಣಿಸದಾಯಿತು. ಮಗುವಿನ ಆಸೆಯಂತೂ ಅವಳಿಗೆ ಬಲವಾಯಿತು. ತಂದೆ ನನ್ನ ಜೊತೆ ಬಾರದೆ , ಹಳ್ಳಿಯಲ್ಲೇ ಶಾಲಾ ಮಾಸ್ತರ ಕೆಲಸ ಮುಂದುವರೆಸಿದ್ದರು.

ಇದ್ದಕ್ಕಿದ್ದಂತೆ ಒಂದು ದಿನ ಬೆಳಿಗ್ಗೆ ತಂದೆ ಬಂದಿಳಿದರು. ತನ್ನ ಸಹೋದ್ಯೋಗಿ ಮೇಷ್ಟ್ರ ಮನೆಯಲ್ಲಿ ಒಂದು ದೊಡ್ಡ ದುರಂತ ನಡೆದಿದೆ. ಪ್ರವಾಸದಲ್ಲಿದ್ದ ಮಗಳು-ಅಳಿಯ ಇಬ್ಬರೂ ರಸ್ತೆ ಅಪಘಾತದಲ್ಲಿ ತೀರಿಕೊಂಡರೆಂದೂ, ಅವರ ತಿಂಗಳ ಹಸುಗೂಸು ಉಳಿದುಕೊಂಡಿದೆ. ನೋಡಿಕೊಳ್ಳುವವರು ಯಾರೂ ಇಲ್ಲದಿರಲು, ನೀವೇಕೆ ಮಗುವನ್ನು ದತ್ತು ಪಡೆಯಬಾರದು ಎಂದು ಪ್ರಸ್ತಾಪಿಸಿದರು. ಲಕ್ಷ್ಮಿಗೆ ಇದೊಂದು ವರದಾನವಾಗಿ ಕಂಡಿರಬೇಕು, ತಕ್ಷಣ ಮಾವನೊಂದಿಗೆ ಹೊರಟು ನಿಂತಳು. ಅಪ್ಪ ಶಾಸ್ತ್ರೋಕ್ತವಾಗಿ ಮಗುವನ್ನು ದತ್ತು ಸ್ವೀಕಾರ ಮಾಡಲು ಅನುವು ಮಾಡಿಕೊಟ್ಟರು.

ಅಷ್ಟರಲ್ಲಿ ನನಗೆ ಪಟ್ಟಣಕ್ಕೆ ವರ್ಗವಾಯಿತು. ಅಂಚೆ-ತಂತಿ ಕಚೇರಿಯಲ್ಲೇ ಇನ್ನೊಂದು ಪರೀಕ್ಷೆ ಮಾಡಿಕೊಂಡದ್ದರಿಂದ ಪಟ್ಟಣಕ್ಕೆ ಹೊರಟುಬಂದೆ. ಲಕ್ಷ್ಮಿ ಅಪ್ಪನೊಂದಿಗೆ ಮೂರು ತಿಂಗಳ ಮಗುವನ್ನು ಕರೆದುಕೊಂಡು ಬಂದಳು. ಕೂಸು ದೇವದತ್ತ ಫಲವೆಂದೇ ನಂಬಿದೆವು. ಎಂದಾದರೊಮ್ಮೆ ರಘುವಿಗೆ ಈ ವೃತ್ತಾಂತವನ್ನು ತಿಳಿಸಬೇಕು, ಸಮಯ ಒದಗಿ ಬರಬೇಕು'

ಡೈರಿ ಜಾರಿತು. ಅಂದರೆ, ಇದೊಂದು ಜನ್ಮ ರಹಸ್ಯವೇ? ರಘು ಸರ್‌ಗೆ ತಿಳಿದಿದೆಯೇ ಇಲ್ಲವೇ, ಮೈ ಸಣ್ಣಗೆ ನಡುಗಿತು. ಈ ಕಾರಣಕ್ಕಾಗಿ ತಾತ ಡೈರಿಯನ್ನು ತಂದಿದ್ದಾರೆಯೇ ಎಂಬ ಅನುಮಾನ ಮಿಂಚಿತು .

ಅಷ್ಟರಲ್ಲಿ ಬೆನ್ನ ಹಿಂದೆ ಯಾರೋ ನಿಂತಂತಾಯಿತು. ಝುಗ್ಗನೆದ್ದು ತಿರುಗಿ ನೋಡಿದರೆ ರಘು ಸರ್ ನಿಂತಿದ್ದರು. ನಾನು ಗಾಬರಿ ಬಿದ್ದು ಬೆವರುವುದನ್ನು ನೋಡಿದ ಅವರು ಬೆನ್ನು ಸವರುತ್ತಾ ಭುಜಗಳನ್ನು ಅದುಮಿದರು. ನಿರ್ವಿಕಾರವಾಗಿ ನನ್ನ ಕೈಯ್ಯಲ್ಲಿದ್ದ ಡೈರಿಯನ್ನು ಬದಿಗೆ ಇಟ್ಟು ನಿಂತೆ. ರಘು ಸರ್ ತಾತನ ಬಳಿ ಕುಳಿತು ತಮ್ಮ ಕೈಗಳನ್ನು ತಾತನ ಹಣೆಯ ಮೇಲೆ ಇಟ್ಟು 'ಅಪ್ಪಾ... ಅಪ್ಪಾ...' ಎಂದು ಕರೆಯುತ್ತಾ ತಾತನ ಕೈಗಳನ್ನು ಹಿಡಿದು ದಿಟ್ಟಿಸುತ್ತಿದ್ದರು. ಅವರ ಕಣ್ಣುಗಳು ತುಂಬಿದ್ದವು. ನಾನು ಅವರಿಗೆ ಸ್ವಲ್ಪ ಖಾಸಗಿ ಸಮಯ ಕೊಡಲು ಕೋಣೆಯ ಹೊರಗೆ ಬಂದೆ. ಹತ್ತಿಪ್ಪತ್ತು ನಿಮಿಷಗಳು ಆಗಿರಬೇಕು. ರಘು ಸರ್ ಹೊರಗೆ ಬಂದು ಡಾಕ್ಟರ್ ನ ಕರೆತರಲು ಹೇಳಿದರು. ನಾನು ಮ್ಯಾನೇಜರ್ ಬಳಿ ಬಂದೆ. ಮನಸ್ಸಿನಲ್ಲಿ ಏನೋ ಅಳುಕು. ತಪ್ಪು ಮಾಡಿದ ಅನುಭವ. ಡಾಕ್ಟರ್ ಬಂದಾಗ ತಾತನ ನಾಡಿ ಸಿಗಲು ಕಷ್ಟವಾಯಿತು. ಮತ್ತೆ ಮತ್ತೆ ಪ್ರಯತ್ನಿಸಿದರು. ಬಿ.ಪಿ. ಏರಲಿಲ್ಲ. ಪಲ್ಸ್ ಸಿಗಲಿಲ್ಲ. ದೇಹ ಬೆಚ್ಚಗೆ ಇತ್ತು. ಏರಿಳಿತವಂತೂ ಇರಲಿಲ್ಲ. ಇನ್ನರ್ಧ ಗಂಟೆ ಬಿಟ್ಟು ಬರುತ್ತೇನೆ ಎಂದು ಹೋದರು. ರಘು ಸರ್ ಡೈರಿಯನ್ನು ಕೈಗೆತ್ತಿಕೊಂಡಾಗ ನನ್ನ ಗುಂಡಿಗೆ ಶಬ್ದ ಅವರಿಗೇ ಕೇಳಿಸಿಬಿಟ್ಟಿತೇನೋ ಎಂದು ಹೆದರಿದೆ. ತಾತನ ಬ್ಯಾಗಿನಲ್ಲಿ ಮತ್ತಿನ್ನೇನಿದೆ ಎಂದು ನೋಡಿದರು. ಅದರಲ್ಲಿದ್ದ ಹಣದ ಕಟ್ಟುಗಳನ್ನೂ, ಆಲ್ಬಂ, ಪಂಚೆ, ಟವೆಲ್ಲು, ಶಾಲನ್ನು ಮುಟ್ಟಿ ಮುಟ್ಟಿ ನೋಡಿ ನಿಟ್ಟುಸಿರು ಬಿಟ್ಟು ಡೈರಿಯನ್ನು ತೊಡೆಯಮೇಲೆ ಇಟ್ಟುಕೊಂಡು ಕಂಬಕ್ಕೆ ಒರಗಿ ಕಣ್ಣು ಮುಚ್ಚಿ ಕುಳಿತರು. ಹೊರಗೆ ಪ್ರವಚನ ಕೇಳುತ್ತಿತ್ತು- 'ನಾನು ಅವುಗಳಲ್ಲಿಲ್ಲ ಅವು ನನ್ನೊಳಗಿವೆ...'

ನಂತರ ಬಂದ ವೈದ್ಯರು. 'ತಾತ ವಿಶ್ವನಾಥನ ಪಾದ ನಿರಾಯಾಸವಾಗಿ ಸೇರಿದ್ದಾರೆ' ಎಂದು ಖಾತ್ರಿಪಡಿಸಿ ಹೊರಟು ಹೋದರು. ಮುಂದಿನ ಕ್ರಿಯೆ ಎಲ್ಲಾ ಯಾಂತ್ರಿಕವಾಗಿ ನಡೆದುಹೋಯಿತು. ತಾತನನ್ನು ಜೀವವಾಗಿ, ಬೂದಿಯಾಗಿ, ಗಂಗೆಯಲ್ಲಿ ಸೇರಿ ಹೋಗುವುದನ್ನು ಕಣ್ಣಾರೆ ಕಂಡೆ. ತಾತ ಖರ್ಚಿಗೆ ಕೊಟ್ಟ ಹಣದಲ್ಲಿ ಸ್ವಲ್ಪ ಇಟ್ಟುಕೊಂಡು ಮಿಕ್ಕದ್ದನ್ನು ರಘು ಸರ್‌ಗೆ ಕೊಟ್ಟು ನಾನು ಕಾಶಿಯಲ್ಲಿ ಹಲವು ದಿನ ಇದ್ದು ನಂತರ ರೈಲಿನಲ್ಲಿ ಬರುತ್ತೇನೆಂದು ಹೇಳಿದೆ. ಅವರು ನಾನು ಕೊಟ್ಟ ಹಣದೊಂದಿಗೆ ಇನ್ನಷ್ಟು ಹಣವಿತ್ತು 'ಮುಂದೆ ಅಗತ್ಯವಿದ್ದರೆ ಸಂಪರ್ಕಿಸಲು ಹಿಂಜರಿಯಬೇಡ' ಎನ್ನುತ್ತಾ ತಮ್ಮ ವಿಸಿಟಿಂಗ್ ಕಾರ್ಡ್ ಅನ್ನು ಇತ್ತರು. ಅದರಲ್ಲಿ ಅವರ ಹೆಸರು 'ಆರ್. ದೇವದತ್ತ' ಎಂದಿತ್ತು. ಧ್ವನಿವರ್ಧಕದ ಮೂಲಕ ಜೋರಾಗಿ ಭಾಷಣ ಕೇಳಿಬರುತ್ತಿತ್ತು. 'ಅಹಂ ಆದಿಶ್ಚ ಮಧ್ಯಂಚ ಭೂತಾ ನಾಮನ್ತ ಏವಾಚ - ಎಲ್ಲಾ ಪ್ರಾಣಿಗಳಿಗೂ ಮೊದಲು ನಾನು, ಮಧ್ಯವೂ ನಾನು, ಕೊನೆಯೂ ನಾನು...'

●